## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1061 |
| ಸದಸ್ಯರ ಹೆಸರು | : | ಶ್ರೀ ಕೆ. ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 21.09.2021 |
| ಉತ್ತರಿಸುವವರು | : | ಮಾನ್ಯ ಗಣಿ ಮತ್ತು ಭೂವಿಜ್ಞಾನ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ದೇಶದ ಸರ್ವೋಚ್ಚ ನ್ಯಾಯಾಲಯ ಕೇಂದ್ರ ಸರ್ಕಾರದ ಸಶಕ್ತ ಸಮಿತಿ ಶಿಫಾರಸ್ಸಿನ ಅನ್ವಯ ರಾಜ್ಯ ಸರ್ಕಾರ ಅಕ್ರಮ ಗಣಿಗಾರಿಕೆಯಿಂದ ಪರಿಸರಕ್ಕೆ ಆಗಿರುವ ಧಕ್ಕೆ ಮತ್ತು ಹಾನಿಗಳನ್ನು ಸರಿಪಡಿಸಲು ಸ್ಥಾಪಿಸಲಾಗಿರುವ ವಿಶೇಷ ಉದ್ದೇಶಿತ ಸಂಸ್ಥೆ ಯಾವುದು; ಈ ಸಂಸ್ಥೆಯ ಕಾರ್ಯ ಉದ್ದೇಶ ಮತ್ತು ವ್ಯಾಪ್ತಿ ಯಾವುವು: (ಪೂರ್ಣ ವಿವರ ನೀಡುವುದು). | ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಬಳ್ಳಾರಿ, ಚಿತ್ರದುರ್ಗ, ಮತ್ತು ತುಮಕೂರು ಈ ಮೂರು ಜಿಲ್ಲೆಗಳಲ್ಲಿ ಗಣಿಗಾರಿಕೆಯಿಂದ ಉಂಟಾದ ಪರಿಸರ ಹಾನಿಯನ್ನು ಪುನಃಸ್ಥಾಪಿಸಲು "ಗಣಿಗಾರಿಕೆಯ ಪ್ರಭಾವಕ್ಕೆ ಒಳಗಾದ ವಲಯಗಳ ಸಮಗ್ರ ಪರಿಸರ ಯೋಜನೆ"[Comprehensive Environment Plan for Mining Impact Zone (CEPMIZ)] ಎಂಬ ಯೋಜನೆಯ ಅನುಷ್ಠಾನ / ಅನುಷ್ಠಾನದ ಮೇಲುಸ್ತುವಾರಿಗಾಗಿ ಕರ್ನಾಟಕ ಗಣಿ ಪರಿಸರ ಪುನಃಶ್ಚೇತನ ನಿಗಮವನ್ನು 2014 ರಲ್ಲಿ ರಾಜ್ಯ ಸರ್ಕಾರ ಸ್ಥಾಪಿಸಿದೆ.<br><br>ಗಣಿಬಾಧಿತ ಪ್ರದೇಶಗಳ ಸಾಮಾಜಿಕ, ಆರ್ಥಿಕ ಮತ್ತು ಪರಿಸರ ಅಭಿವೃದ್ಧಿಗೆ ಪೂರಕವಾದ ಪರಿಸರ ಪುನಃಶ್ಚೇತನ, ಕೃಷಿ ಮತ್ತು ಸಂಬಂಧಿಸಿದ ಚಟುವಟಿಕೆಗಳ, ಕುಡಿಯುವ ನೀರು ಮತ್ತು ನೈರ್ಮಲ್ಯ, ಗ್ರಾಮೀಣ ರಸ್ತೆಗಳು, ಆರೋಗ್ಯ, ಶಿಕ್ಷಣ, ದುರ್ಬಲ ವರ್ಗಗಳ ಅಭಿವೃದ್ಧಿ, ವಸತಿ, ಕೌಶಲ್ಯಾಭಿವೃದ್ಧಿ, ಪ್ರವಾಸೋದ್ಯಮ, ನೀರಾವರಿ, ಮೂಲಭೂತ ಸೌಕರ್ಯ (Physical infrastrucuture), ರಸ್ತೆ ಮತ್ತು ಸಾರಿಗೆ, (Roads and communication), ರೈಲ್ವೆ ಮೂಲಭೂತ ಸೌಕರ್ಯ ಮುಂತಾದ ಶೀರ್ಷಿಕೆಗಳಡಿ ಸಮಗ್ರವಾದ ಯೋಜನೆಯನ್ನು ರೂಪಿಸುವುದು ಹಾಗೂ ಈ ಯೋಜನೆಗಳನ್ನು ಪಾರದರ್ಶಕವಾಗಿ ಅನುಷ್ಠಾನಗೊಳಿಸುವುದು / ಇಲಾಖೆಗಳು ಅನುಷ್ಠಾನಗೊಳಿಸಿದಲ್ಲಿ ಮೇಲುಸ್ತುವಾರಿ ವಹಿಸುವುದು ನಿಗಮದ ಮುಖ್ಯ ಉದ್ದೇಶವಾಗಿದೆ. |
| ಆ) | ಸರ್ವೋಚ್ಚ ನ್ಯಾಯಲಯವು ಕೇಂದ್ರ ಸಶಕ್ತ ಸಮಿತಿ ಶಿಫಾರಸ್ಸಿನ ಅನ್ವಯ ಅಕ್ರಮ ಗಣಿಗಾರಿಕೆ ಮೇಲೆ ವಿಧಿಸಲಾಗುವ ದಂಡಗಳು ಯಾವುವು; | ಮಾನ್ಯ ಸರ್ವೋಚ್ಚ ನ್ಯಾಯಾಲಯವು 'ಬಿ' ವರ್ಗದ ಗಣಿಗುತ್ತಿಗೆಗಳಿಂದ ತೆಗೆಯಲಾದ ಅದಿರಿನ ಪ್ರಮಾಣವನ್ನು ಅಂದಾಜಿಸಲು ಕೇಂದ್ರ ಉನ್ನತಾಧಿಕರಸ್ಥ ಸಮಿತಿಯ ಸದಸ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿರುತ್ತದೆ. ಸದರಿ ಸಮಿತಿಯಿಂದ 'ಬಿ' ವರ್ಗದ ಗಣಿಗುತ್ತಿಗೆಗಳಿಂದ ತೆಗೆಯಲಾದ ಅದಿರಿನ ಪ್ರಮಾಣವನ್ನು ಅಂದಾಜಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ. ಸದರಿ ಸಮಿತಿ ನೀಡುವ ವರದಿಗೆ ಒಳಪಟ್ಟು, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ, ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ 'ಬಿ' ವರ್ಗದ ಗಣಿಗುತ್ತಿಗೆದಾರರು ಗಣಿಗಾರಿಕೆ ಪುನರಾರಂಭಿಸುವ ಪೂರ್ವದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ Compensatory payment ನ್ನು ದಂಡದ ರೂಪದಲ್ಲಿ ಈ ಕೆಳಕಂಡಂತೆ ಮಾನಿಟರಿಂಗ್ ಸಮಿತಿಗೆ ಪಾವತಿಸುತ್ತಾರೆ.<br>1) ಗಣಿಗಾರಿಕೆ ಪ್ರದೇಶದ ಅತೀ ಕ್ರಮಣಕ್ಕಾಗಿ ಪ್ರತಿ ಹೆಕ್ಟೇರ್‌ಗೆ ರೂ. 5.00 ಕೋಟಿ<br>2) ಗಣಿ ತ್ಯಾಜ್ಯ ಅತಿ ಕ್ರಮಣಕ್ಕೆ ಪ್ರತಿ ಹೆಕ್ಟೇರ್‌ಗೆ ರೂ. 1.00 ಕೋಟಿ. |

....2.

| | | |
|---|---|---|
| ಇ) | ಪರಿಸಮತೋಲನ ಕಾಪಾಡಲು ಸರ್ವೋಚ್ಚ ನ್ಯಾಯಾಲಯ ಆದೇಶಿಸಿರುವಂತೆ ರಾಜ್ಯ ಸರ್ಕಾರ ವಿಶೇಷ ನಿಧಿ ಸ್ಥಾಪಿಸಿದೆಯೇ; ಹಾಗಿದ್ದಲ್ಲಿ, ಈ ನಿಧಿಯ ವಿವರ ಒಳಗೊಂಡಂತೆ ತಹಲ್‌ವರೆಗೆ ಸ್ವೀಕೃತವಾದ ನಿಧಿಯೆಷ್ಟು ಮತ್ತು ಈ ನಿಧಿಯ ಮೂಲಗಳು ಯಾವುವು: | ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ರಾಜ್ಯ ಸರ್ಕಾರವು ದಿನಾಂಕ 21.06.2014 ರ ಆದೇಶ ಸಂಖ್ಯೆ CI 121 MMM 2014 ರಲ್ಲಿ ಕರ್ನಾಟಕ ಗಣಿ ಪರಿಸರ ಪುನಃಶ್ಚೇತನ ನಿಗಮವನ್ನು [Karnataka Mining Environment Restoration Corporation (KMERC)] ವಿಶೇಷ ಉದ್ದೇಶಿತ ವಾಹಕ ಸಂಸ್ಥೆಯಾಗಿ ಸ್ಥಾಪಿಸಲು ಅನುಮೋದನೆ ನೀಡಿದೆ. ಅದರಂತೆ ಕಂಪನಿ ಕಾಯ್ದೆ 2013ರ ಕಂಡಿಕೆ 8 ರ ಅಡಿಯಲ್ಲಿ ನಿಗಮವನ್ನು ಲಾಭಾಪೇಕ್ಷೆ ರಹಿತ ನಿಗಮವೆಂದು ದಿನಾಂಕ 30-06-2014ರಲ್ಲಿ ನೋಂದಾಯಿಸಲಾಗಿದೆ.<br><br>ಪರಿಸರ ಸಮತೋಲನ ಕಾಪಾಡಲು ರಾಜ್ಯ ಸರ್ಕಾರವು ಯಾವುದೇ ವಿಶೇಷ ನಿಧಿ ಸ್ಥಾಪಿಸಿರುವುದಿಲ್ಲ. ಆದರೆ, ಭಾರತ ಸರ್ಕಾರವು M.M.(D&R) Act 2015 ರ ತಿದ್ದುಪಡಿ ಸೆಕ್ಷನ್ 9(ಬಿ) ರಂತೆ ಜಿಲ್ಲಾ ಖನಿಜ ಪ್ರತಿಷ್ಠಾನ ಎಂಬ ಲಾಭರಹಿತ ಟ್ರಸ್ಟ್ ಸ್ಥಾಪಿಸಲು ಆದೇಶಿಸಿರುತ್ತದೆ. ಅದರಂತೆ ಗಣಿ ಬಾಧಿತ ಪ್ರದೇಶಗಳ ಅಭಿವೃದ್ಧಿ ಹಾಗೂ ಜನರ ಕಲ್ಯಾಣಕ್ಕಾಗಿ ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿಯನ್ನು ಹರಾಜು ರಹಿತ ಮಂಜೂರು ಮಾಡಲಾದ ಹಾಗೂ ಹರಾಜು ಮೂಲಕ ಮಂಜೂರು ಮಾಡಲಾದ ಗಣಿ ಹಾಗೂ ಕಲ್ಲು ಗಣಿ ಗುತ್ತಿಗೆದಾರರು ಕೈಗೊಂಡ ಗಣಿಗಾರಿಕೆಯಿಂದ ರಾಜಧನದ ಮೇಲೆ ಶೇ.30 ಹಾಗೂ ಶೇ.10 ರಷ್ಟು ಅನ್ವಯವಾಗುವಂತೆ ಕ್ರಮವಾಗಿ ನಿಧಿಯನ್ನು ಸಂಗ್ರಹಿಸಲಾಗುತ್ತಿದೆ. 2015-16 ರಿಂದ 2020-21 (ಆಗಸ್ಟ್-2021) ತಿಂಗಳವರೆಗೆ District Mineral Foundation Trust (DMFT) ಅಡಿಯಲ್ಲಿ ರೂ.2856.87 ಕೋಟಿ ಸಂಗ್ರಹಿಸಲಾಗಿರುತ್ತದೆ. |
| ಈ) | ಈ ಸಂಸ್ಥೆಯ ಬಾಧಿತ ಜಿಲ್ಲೆಗಳಲ್ಲಿ ಪರಿಸರ ಸಮತೋಲನ ಕಾಯಲು ರೂಪಿಸಿರುವ ಕಾರ್ಯ ಯೋಜನೆಗಳು ಯಾವುವು; (ಅವುಗಳ ಭೌತಿಕ ಮತ್ತು ಆರ್ಥಿಕ ಗುರಿ ಮತ್ತು ಸಾಧನೆಗಳನ್ನು ಒಳಗೊಂಡ ಪೂರ್ಣ ವಿವರ ನೀಡುವುದು). | ಗಣಿ ಭಾದಿತ ಪ್ರದೇಶಗಳ ಸಾಮಾಜಿಕ, ಆರ್ಥಿಕ ಮತ್ತು ಪರಿಸರ ಅಭಿವೃದ್ಧಿಗೆ ಪೂರಕವಾದ ಪರಿಸರ ಪುನಃಶ್ಚೇತನ, ಕೃಷಿ ಮತ್ತು ಸಂಬಂಧಿಸಿದ ಚಟುವಟಿಕೆಗಳ, ಕುಡಿಯುವ ನೀರು ಮತ್ತು ನೈರ್ಮಲ್ಯ, ಗ್ರಾಮೀಣ ರಸ್ತೆಗಳು, ಆರೋಗ್ಯ, ಶಿಕ್ಷಣ, ದುರ್ಬಲ ವರ್ಗಗಳ ಅಭಿವೃದ್ಧಿ, ವಸತಿ, ಕೌಶಲ್ಯ ಅಭಿವೃದ್ಧಿ, ಪ್ರವಾಸೋದ್ಯಮ, ನೀರಾವರಿ, ಗಣಿಗಾರಿಕೆಗಾಗಿ ರೈಲ್ವೆ ಮೂಲ ಸೌಕರ್ಯ ಕಲ್ಪಿಸುವುದು ಮುಂತಾದ ವಿವಿಧ ಯೋಜನೆಯನ್ನು ಅನುಷ್ಠಾನಗೊಳಿಸಬೇಕಿದ್ದು, ವಿವಿಧ ಇಲಾಖೆಗಳು ಕೈಗೊಳ್ಳಲು ಉದ್ದೇಶಿಸಿರುವ ಕಾರ್ಯ ಚಟುವಟಿಕೆಗಳನ್ನು ಜಿಲ್ಲಾಡಳಿತ ಗುರುತಿಸಿ ಸರ್ಕಾರದ ಮಟ್ಟದಲ್ಲಿ ಕ್ರೋಢೀಕರಿಸಿ "ಗಣಿಗಾರಿಕೆಯ ಪ್ರಭಾವಕ್ಕೆ ಒಳಗಾದ ವಲಯಗಳ ಸಮಗ್ರ ಪರಿಸರ ಯೋಜನೆ"[Comprehensive Environment Plan for Mining Impact Zone (CEPMIZ)] ಎಂಬ ರೂ.24,996.71 ಕೋಟಿ ಅಂದಾಜು ಮೊತ್ತದ ಸಮಗ್ರ ಯೋಜನೆಯನ್ನು ರೂಪಿಸಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅನುಮೋದನೆಗೆ ಸಲ್ಲಿಸಲಾಗಿದೆ. ಶೀರ್ಷಿಕೆವಾರು ವಿವರವನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ. ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅನುಮೋದನೆ ನಿರೀಕ್ಷಿಸಲಾಗಿದೆ. |
| ಉ | ರಾಜ್ಯ ಸರ್ಕಾರ ತಯಾರಿಸಿರುವ ಕ್ರಿಯಾಶೀಲ ಯೋಜನೆ ಅನುಷ್ಠಾನಕ್ಕೆ ಸರ್ವೋಚ್ಚ ನ್ಯಾಯಾಲಯದ ಅನುಮತಿ ಅವಶ್ಯವೆ; ಹಾಗಿದ್ದಲ್ಲಿ, ಅನುಮತಿ ಪಡೆಯಲಾಗಿದೆಯೇ; ಇಲ್ಲದಿದ್ದಲ್ಲಿ, ಕಾರಣವೇನು ? (ಪೂರ್ಣ ವಿವರ ನೀಡುವುದು) | ಯೋಜನೆ ಅನುಷ್ಠಾನಕ್ಕೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅನುಮತಿ ಅವಶ್ಯವಿದ್ದು, ಅದರಂತೆ ಅನುಮೋದನೆಯನ್ನು ಪಡೆಯಲು ಈ ಕೆಳಕಂಡಂತೆ ಕ್ರಮವಹಿಸಲಾಗಿದೆ.<br><br>1) ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿನಾಂಕ 21.03.2018ರ ಆದೇಶದಂತೆ ರೂ.24,996.71 ಕೋಟಿ ಅಂದಾಜು ವೆಚ್ಚದ ಪರಿಷ್ಕೃತ CEPMIZ ಯೋಜನೆಯನ್ನು ರಾಜ್ಯ ಸರ್ಕಾರವು ದಿನಾಂಕ 11.10.2018ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. |

| | | |
|---|---|---|
| | | 2) ದಿನಾಂಕ 24.01.2019 ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯ Amicus Curiae ಯವರಾದ ಶ್ರೀ. ಶ್ಯಾಮ್ ದಿವಾನರನ್ನು ರಾಜ್ಯ ಸರ್ಕಾರ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಲು ಕೋರಿತ್ತು. ಅದರಂತೆ, ಶ್ರೀ. ಶ್ಯಾಮ್ ದಿವಾನರು ವರದಿಯನ್ನು ದಿನಾಂಕ 19.06.2020 ರಂದು ಸಲ್ಲಿಸಿರುತ್ತಾರೆ.<br><br>3) ಪ್ರಕರಣವನ್ನು ಕೈಗೆತ್ತಿಕೊಳ್ಳುವಂತೆ/ಯೋಜನೆಗೆ ಅನುಮೋದನೆ ನೀಡುವಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯವನ್ನು ನಿರಂತರವಾಗಿ ಒತ್ತಾಯಿಸಲಾಗಿದೆ.<br><br>4) CEPMIZ ಪ್ರಸ್ತಾವನೆಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಶೀಘ್ರ ಅನುಮೋದನೆ ದೊರಕಿಸಲು ರಾಜ್ಯದ ಅಡ್ವೋಕೇಟ್ ಜನರಲ್ (Advocate General) ರವರನ್ನೂ ಕೋರಲಾಗಿತ್ತು.<br><br>5) ದಿನಾಂಕ 29.05.2020 ರಂದು ಪ್ರಕರಣ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಬಂದಿದ್ದು, ತದನಂತರ ಈ ವಿಷಯವಾಗಿ ಅಡ್ವೋಕೇಟ್ ಜನರಲ್ ರವರ ಸೂಚನೆಯಂತೆ, ಮಾನ್ಯ Solicitor General ರವರ ಮೂಲಕ ದಿನಾಂಕ 22.07.2020, 27.10.2020, 02.02.2021 ಮತ್ತು 24.02.2021 ಹೀಗೆ 4 ಬಾರಿ CEPMIZ ಅನುಮೋದನೆಯ ಪ್ರಕರಣವನ್ನು ಶೀಘ್ರ ಕೈಗೆತ್ತಿಕೊಳ್ಳಲು ಅರಿಕೆ (mentioning) ಮಾಡಿಕೊಳ್ಳಲಾಗಿದೆ.<br><br>6) ಅಲ್ಲದೆ ದಿನಾಂಕ 15.04.2020 ರಂದು ಒಂದು ಬಾರಿ Emergent Application ಹಾಗೂ ದಿನಾಂಕ 05.11.2020 ಮತ್ತು 08.07.2021 ಎರಡು ಲಿಖಿತ mentioning application ಅನ್ನು ಕೂಡಾ ದಾಖಲಿಸಲಾಗಿದೆ.<br><br>7) ದಿನಾಂಕ 26.07.2021 ರಂದು ಪುನ: ಮಾನ್ಯ Solicitor General ರವರ ಸೂಚನೆಯಂತೆ Advocate on record ಇವರ ಮೂಲಕ mentioning application ಸಲ್ಲಿಸಲಾಗಿದೆ.<br><br>8) ದಿನಾಂಕ 7.08.2021 ರಂದು ಮಾನ್ಯ Solicitor General ರವರೊಂದಿಗೆ ಚರ್ಚಿಸಿ, ಸದರಿಯವರ ಸಲಹೆಯಂತೆ ದಿನಾಂಕ 13.08.2021 ರಂದು ಪುನ: ಒಂದು mentioning application ಸಲ್ಲಿಸಲಾಗಿದೆ.<br><br>9) ದಿನಾಂಕ: 14.09.2021ರಂದು ಮಾನ್ಯ Solicitor General ರವರು ಮಾನ್ಯ ಮುಖ್ಯ ನ್ಯಾಯಾಧೀಶರ ಮುಂದೆ ಮತ್ತೆ ವಿಷಯವನ್ನು ಪ್ರಸ್ತಾಪಿಸಿದ್ದು (mentioning), ಮಾನ್ಯ ಮುಖ್ಯ ನ್ಯಾಯಾಧೀಶರು ಈ ವಿಷಯದಲ್ಲಿ ವಿಶೇಷ ಪೀಠ ಸ್ಥಾಪಿಸಬೇಕಾಗಿದ್ದು, ಪೀಠ ಸ್ಥಾಪಿಸಿದ ನಂತರ ಪ್ರಕರಣವನ್ನು ನ್ಯಾಯಾಲಯದ ಮುಂದೆ ಲಿಸ್ಟ್ ಮಾಡಲಾಗುವುದು ಎಂದು ಮೌಖಿಕವಾಗಿ ತಿಳಿಸಿರುತ್ತಾರೆ.<br><br>10) ಅದರಂತೆ ಮಾನ್ಯ ನ್ಯಾಯಾಲಯದ ಆದೇಶ ನಿರೀಕ್ಷಿಸಲಾಗಿದೆ. |

ಸಂಖ್ಯೆ: ಸಿಐ 93 ಸಿಎಂಸಿ 2021

(ಆಚಾರ್ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂವಿಜ್ಞಾನ ಮತ್ತು ಮಹಿಳಾ
ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಕೆ.ಎ ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು)

ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1061 ಉತ್ತರಕ್ಕೆ ಅನುಬಂಧ

| ಕ್ರ. ಸಂ. | ವಲಯಗಳು | ಬಳ್ಳಾರಿ | ಚಿತ್ರದುರ್ಗ | ತುಮಕೂರು | ಒಟ್ಟು ಮೊತ್ತ ರೂ. ಕೋಟಿಗಳು |
|---|---|---|---|---|---|
| 1 | ಪರಿಸರ ಪುನ: ಸ್ಥಾಪನ | | | | |
| a | ಅರಣ್ಯ | 1557.79 | 540.83 | 500.52 | 2599.14 |
| b | ಪರಿಸರ ಮಾಲಿನ್ಯ | 27.00 | 14.81 | 14.81 | 56.61 |
| | | 1584.79 | 555.64 | 515.33 | 2655.75 |
| 2 | ಕೃಷಿ ಮತ್ತು ಇತರೆ | | | | |
| a | ಕೃಷಿ | 442.45 | 324.85 | 287.10 | 1054.40 |
| b | ತೋಟಗಾರಿಕೆ | 64.73 | 17.06 | 14.03 | 95.82 |
| c | ರೇಷ್ಮೆ | 0.00 | 3.50 | 3.00 | 6.50 |
| d | ಪಶುಸಂಗೋಪನ | 284.76 | 38.00 | 22.20 | 344.96 |
| e | ಮೀನುಗಾರಿಕೆ | 89.99 | 7.63 | 3.75 | 101.37 |
| | | 881.93 | 391.04 | 330.08 | 1603.05 |
| 3 | ಕುಡಿಯುವ ನೀರು /ನೈರ್ಮಲ್ಯ ಮತ್ತು ಗ್ರಾಮೀಣ ರಸ್ತೆಗಳು | | | | |
| a | ಕುಡಿಯುವ ನೀರು | 2569.98 | 661.00 | 236.88 | 3467.86 |
| b | ನೈರ್ಮಲ್ಯ | 374.00 | 37.00 | 13.00 | 424.00 |
| c | ಗ್ರಾಮೀಣ ರಸ್ತೆಗಳು | 520.72 | 280.68 | 236.64 | 1038.04 |
| | | 3464.70 | 978.68 | 486.52 | 4929.90 |
| 4 | ಆರೋಗ್ಯ | | | | |
| a | ಜಿಲ್ಲಾ ಆಸ್ಪತ್ರೆ | 286.17 | 114.04 | 131.90 | 532.11 |
| b | ತಾಲ್ಲೂಕ/ಸಿ.ಹೆಚ್.ಸಿ/ಪಿ.ಹೆಚ್.ಸಿ/ ಆಯುಷ್/ರಕ್ತನಿಧಿ, ಇತರ | 151.17 | 141.90 | 77.77 | 370.84 |
| c | ವಿಶೇಷ ಆರೋಗ್ಯ ಕೇಂದ್ರ, ಸಂಡೂರು | 301.63 | | | 301.63 |
| d | ಮೆಡಿಕಲ್ ಕಾಲೇಜು, ಬಳ್ಳಾರಿ | 711.20 | 0 | 0 | 711.20 |
| | | 1450.17 | 255.94 | 209.67 | 1915.78 |
| 5 | ಶಿಕ್ಷಣ | | | | |
| a | ಶಿಕ್ಷಣ | 413.49 | 280.58 | 186.62 | 880.69 |
| b | ಪದವಿ ಪೂರ್ವಶಿಕ್ಷಣ | 230.00 | 50.00 | 5.66 | 285.66 |
| | | 643.49 | 330.58 | 192.28 | 1166.35 |
| 6 | ದುರ್ಬಲ ವರ್ಗಗಳ ಅಭಿವೃದ್ಧಿ | | | | |
| a | ಮಹಿಳಾ ಮತ್ತು ಮಕ್ಕಳ ಕಲ್ಯಾಣ | 398.87 | 94.03 | 110.78 | 603.68 |
| b | ಸಮಾಜ ಕಲ್ಯಾಣ | 200.00 | 50.00 | 51.94 | 301.94 |
| c | ಹಿಂದುಳಿದ ವರ್ಗ | 78.03 | 25.31 | 25.00 | 128.34 |
| d | ಅಲ್ಪಸಂಖ್ಯಾತರ ಅಭಿವೃದ್ಧಿ | 18.70 | 19.20 | 10.70 | 48.60 |
| | | 695.60 | 188.54 | 198.42 | 1082.56 |
| 7 | ವಸತಿ | 1027.00 | 106.88 | 60.00 | 1193.88 |
| 8 | ಕೌಶಲ್ಯಾಭಿವೃದ್ಧಿ | 436.19 | 70.79 | 31.27 | 538.25 |
| 9 | ಪ್ರವಾಸೋದ್ಯಮ | 148.00 | 34.00 | 7.00 | 189.00 |
| 10 | ನೀರಾವರಿ | 799.00 | 154.70 | 53.00 | 1006.70 |
| 11 | ಮೂಲ ಭೂತಸೌಕರ್ಯ | 734.99 | 105.29 | 44.08 | 884.36 |
| 12 | ರಸ್ತೆ ಮತ್ತು ಸಂಪರ್ಕ | 1512.55 | 620.22 | 426.40 | 2559.17 |
| 13 | ರೈಲು ಮೂಲಸೌಕರ್ಯ | | | | 5271.96 |
| | | 13378.41 | 3792.30 | 2554.05 | 24995.71 |